ಎಂ.ಎ. ಕುಮಾರ್, ಬೆಂಗಳೂರು
ಹೆಣ್ಣು ಸೊಂಟದ ಮೇಲೆ ನೀರಿನ ಬಿಂದಿಗೆ, ಕಂಕುಳಲ್ಲಿ ಮಗುವನ್ನು ಹೊರುತ್ತಿದ್ದ ದೃಶ್ಯ ಮಾಯವಾಗಲು ಕಾರಣ?



ಬಾಗಿಲಿಗೇ ಬಿಸ್ಲೇರಿ, ಚೈಲ್ಡ್ ಕೇರ್ ಆಂಟಿ ಬರುವ ವ್ಯವಸ್ಥೆ ಇದೆಯಲ್ಲ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ
ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ. ಅತ್ತೆಸೊಸೆಯರ ಜಗಳ?
ಕೊಂಪೆ ಮುಳುಗುವ ತನಕ.

ಮಹಾವೀರ ಕಾಸರ, ಶಿವಮೊಗ್ಗ
ರಾಜಕಾರಣಿಗಳಿಗೆ ವಯೋಮಿತಿ; ಲಿಖಿತ, ಮೌಖಿಕ, ನೈತಿಕ ಪರೀಕ್ಷೆಗಳನ್ನು ಕಡ್ಡಾಯಗೊಳಿಸಿದರೆ?
‘ಇದು ಹಿರಿಯರಿಗೆ, ಮುಗ್ಧ ಹಳ್ಳಿಮುಕ್ಕರಿಗೆ ಮಾಡಿದ ಅವಮಾನ’ ಎನ್ನುತ್ತಾ ಸಂಪು ಹೂಡುವರು.

ಬೂಕನಕೆರೆ ವಿಜೇಂದ್ರ, ಮೈಸೂರು
ಸುಂದರವಾದ ಹೆಂಗಸರೇಕೆ ಹೆಚ್ಚು ಮಾತನಾಡುವುದಿಲ್ಲ?



ಮುಗುಳ್ನಗೆಯಲ್ಲೇ ವಿಶ್ವವನ್ನು ಗೆಲ್ಲುವಾಗ ಮಾತು ವ್ಯರ್ಥವೆಂದು.

ಬಿ.ಆರ್. ಉಷಾ, ಕೆನಡಾ
ನಿಮ್ಮ ಮೆದುಳಿಗೆ ಯಾವ ಗೊಬ್ಬರ ಹಾಕುತ್ತೀರ?
ಗತಸಾಹಿತ್ಯದ ರಸಗೊಬ್ಬರ.

ಸುಧೀಂದ್ರ, ಬೆಂಗಳೂರು
ಖ್ಯಾತ ನಟಿಯೊಬ್ಬಳು ತನ್ನ ಪರ್ಸಿನಲ್ಲಿ ಸದಾ ಮೌತ್ ಫ್ರೆಷನರ್ ಇಟ್ಟುಕೊಂಡಿರುತ್ತಾಳಂತಲ್ಲ?
‘ಬಾಯಿ ಬಿಟ್ಟರೆ ಗಂಧಗೇಡಿ’ ಎನ್ನಿಸಿಕೊಳ್ಳದಿರಲು.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ವಿಜ್ಞಾನ ಎಂದರೇನು?
ಅಜ್ಞಾನದ ಪೊರೆಯನ್ನು ಹೋಗಲಾಡಿಸುವ ಸಾಧನ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ತಪ್ಪಗೆ ಗಂಡ ಹೇಳಿದ್ದನ್ನು ಕೇಳಿಕೊಂಡು ಇರುವ ಹೆಂಡತಿ ಯಾರಿಗೆ ಸಿಗುತ್ತಾಳೆ?
ಹೆಂಡತಿಯ ಬೇಕುಗಳನ್ನು ತಿಳಿದು ಅಷ್ಟನ್ನೇ ಮಾತನಾಡುವ ಪತಿಗೆ.

ಕಾವ್ಯಶ್ರೀ ಪತ್ರಿಮಠ, ಸುರಪುರ
ವರದಾನಕ್ಕೂ ಕನ್ಯಾದಾನಕ್ಕೂ ವ್ಯತ್ಯಾಸವೇನು?
ವರದಾನ ಫ್ರೀ; ಕನ್ಯಾದಾನ ದುಬಾರಿ.

ಜಗದೀಶ ಬಿ. ಹೊಸೂರು. ಮೈಸೂರು
ನಮ್ಮ ಮನೆ ಸ್ವಚ್ಛವಾಗಿರಬೇಕೆನ್ನುವವರು ನಮ್ಮ ದೇಶ ಸ್ವಚ್ಛವಾಗಿರಲು ಏಕೆ ಸಹಕರಿಸುವುದಿಲ್ಲ?
ಹಾಗೇನಿಲ್ಲ. ದೇಶವನ್ನೇ ಗುಡಿಸಿ ಗುಂಡಾಂತರ ಮಾಡಲು ಸಹಕರಿಸುವವರು ಅಲ್ಲಲ್ಲಿ ಇದ್ದಾರೆ.

ವಿ. ಹೇಮಂತಕುಮಾರ್, ಬೆಂಗಳೂರು
ಅಳಿಯ ಅತ್ತೆಯ ಮನೆಗೆ ಸಂಜೆಯೇ ಬರುವುದು ಏಕೆ?
ಮಡದಿ ಆದೇಶಿಸಿದ ಸಾಮಾನುಗಳನ್ನೆಲ್ಲ ಕೊಂಡು ತರಲು ಸಮಯ ಬೇಕಲ್ಲ.

ಮಲ್ಲಿಕಾರ್ಜುನ, ಸುರಧೇನುಪುರ
ರಾಜಕಾರಣಿಗಳ ದಿನಾಚರಣೆ ಏಕಿಲ್ಲ?
ತೋಳ, ಹದ್ದು, ನರಿಗಳಿಗೆ ದಿನಾಚರಣೆಗಳು ಇರುವುದಿಲ್ಲ.

ಸಿಹಿಮೊಗೆ ರಮೇಶ್, ಮೈಸೂರು
ಹೋದ ಮಾನದ ನಿಖರವಾದ ಗರಿಷ್ಠ ಬೆಲೆ ಎಷ್ಟು? ಹೇಳದಿದ್ದರೆ ನಿನ್ನ ತಲೆ ಸಾವಿರ ಹೋಳಾದೀತು!
ಮಾನ ತೆಗೆದವನಿಗೆ ದಂಡವಾಗಿ ತೆರಲು ತಾಕತ್ತಿರುವಷ್ಟೇ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಮದುವೆ ಆಗಿದೆಯಾ ಎಂದು ಕೇಳಿದರೆ ಎರಡು ಮಕ್ಕಳಿವೆ ಎನ್ನುವರಲ್ಲ?
ತಿಳಿಯಿತು. ಇನ್ನೂ ಮದುವೆಯಾಗುವಷ್ಟು ಹೊಂದಾಣಿಕೆ ಬೆಳೆದಿರದ ಲಿವಿಂಗ್ ಟುಗೆದರ್ರು!

## ವಾರದ ಪ್ರಶ್ನೆ

ಅನಸೂಯ ಟಿ., ಕೇದಿಗೆಮನೆ
ತೆಳ್ಳಗೆ ಬೆಳ್ಳಗೆ ಇರುವವರನ್ನು ಮಾತ್ರ ಸುಂದರಿಯರ ಸಾಲಿಗೆ ಸೇರಿಸಿದ್ದು ಯಾರು?
ಪುರಾಣ ಓದಿದವರು; ಕಪ್ಪಗೆ ದಪ್ಪಗೆ ಇರುವವಳು ಯಾವುದೇ ಋಷಿಯನ್ನು ಆಕರ್ಷಿಸಿದ ದಾಖಲೆ ಇಲ್ಲ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಸಂಗೀತದಿಂದ ಆಗುವ ಲಾಭವೇನು ರಾಂಜೀ?
ಜೀವನದಲ್ಲಿ ‘ತಾಳ’ ಬಲ್ಲವನು ಸರಾಗವಾಗಿ ಜೀವಿಸಬಲ್ಲನೆಂದು ತಿಳಿಯುತ್ತದೆ.

ಜೀವಿ, ಗೊಂಡೇದಹಳ್ಳಿ
ಅದ್ದೂರಿ ವಿವಾಹ ಮತ್ತು ಸಿನಿಮಾಗಳು ದೀರ್ಘಕಾಲ ಉಳಿಯುವುದಿಲ್ಲವಲ್ಲ?
ನಿಜ. ಒರಟು ಜೀನ್ಸ್ ಬರುವಷ್ಟು ಬಾಳಿಕೆ ಮೃದು ರೇಷ್ಮೆ ಬರುವುದಿಲ್ಲ.

ಹರಿತಸ, ಬೆಂಗಳೂರು
ಕಿವಿಮಾತು ಮತ್ತು ಪಿಸುಮಾತುಗಳಲ್ಲಿ ಯಾವುದು ಆಪ್ಯಾಯಮಾನ?



ಪಿಸುಮಾತೇ; ಗುಟ್ಟಿಗಿರುವ ಆಕರ್ಷಣೆ ಉಪದೇಶಕ್ಕಿಲ್ಲ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ನಮ್ಮ ದೇಶದ ಹೆಣ್ಣುದೇವತೆಗಳು ಪ್ರಾಣಿಗಳನ್ನೇ ಬಲಿ ಕೇಳುತ್ತವೆ. ಮನುಷ್ಯರನ್ನೇಕೆ ಕೇಳುವುದಿಲ್ಲ?
ಮನುಷ್ಯರನ್ನು ಅಷ್ಟು ಸುಲಭವಾಗಿ ಜೀರ್ಣಿಸಿಕೊಳ್ಳಲು ಆಗುವುದಿಲ್ಲ.

ಸುಮನಾ, ತೆಲಂಗಾಣ
ವಯೋಸಹಜ ಮದುವೆಗಳು ಈಗೀಗ ವಯೋವೃದ್ಧ ವಿವಾಹಗಳು ಆಗುತ್ತಿರುವುದರ ಕಾರಣ?
ಕೆಲಸದಿಂದ ಕೆಲಸಕ್ಕೆ ಕಪ್ಪೆಗಳಂತೆ ಹಾರಿ ದೃಢವಾಗಿ ನಿಲ್ಲುವಷ್ಟರಲ್ಲಿ ಹಲ್ಲುಬೀಳುವ ವಯಸ್ಸಾಗಿರುತ್ತಲ್ಲ!

■ ರಾಮ್